

## ಜೀವಂತಿಕೆಗೆ ಸಾಕ್ಷಿಯಾದ ಮುರಿಯಾಳು

ನಗರದ ಆಕರ್ಷಣೆ, ಉದ್ಯೋಗ, ಶಿಕ್ಷಣ ಇತ್ಯಾದಿ ಕಾರಣ ಗ್ರಾಮೀಣ ಪ್ರದೇಶದ ಬಹುತೇಕ ಜನ ಪೇಟೆ ಸೇರಿದ್ದಾರೆ. ಹಳ್ಳಿಗಳು ವೃದ್ಧಾಶ್ರಮ ಆಗುತ್ತಿವೆ ಎನ್ನುವ ಆತಂಕ ಎದುರಾಗಿದೆ. ಗ್ರಾಮೀಣ ಭಾಗದಲ್ಲಿ ಕೆಲಸಕ್ಕೆ ಜನ ಇಲ್ಲ, ಇರುವವರಿಗೆ ಪೂರ್ಣಪ್ರಮಾಣದ ಕೆಲಸ ಇಲ್ಲ. ಈ ನಡುವೆ ಎಡಬಿಡಂಗಿತನ ಕಾಡುತ್ತಿದೆ. ಯಲ್ಲಾಪುರ ಗ್ರಾಮೀಣ ಭಾಗದಲ್ಲಿ ಕೆಂಪಡಿಕೆ ಸೀಜನ್ ಜೋರಾಗಿ ಪ್ರಾರಂಭವಾಗಿದೆ. ಕೊನೆ ಕೊಯ್ಲು ಸಂದರ್ಭದಲ್ಲಿ ಎಷ್ಟು ಜನ ಇದ್ದರೂ ಸಾಲದು. ಕೈತುಂಬ ಬಿಡುವಿಲ್ಲದ ಕೆಲಸ. ಇಂತಹ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಕೊರತೆ ನೀಗಿಸಿಕೊಳ್ಳಲು ಹಳೆಯ ಕಾಲದಲ್ಲಿ ಹೆಚ್ಚು ಚಾಲ್ತಿಯಲ್ಲಿದ್ದ ಮುರಿಯಾಳು ಪದ್ಧತಿ ಮತ್ತೆ ಮುನ್ನೆಲೆಗೆ ಬಂದಿದೆ. ಮುರಿಯಾಳು ಪದ್ಧತಿ ಎಂದರೆ, ಗ್ರಾಮೀಣ ಭಾಗದ ನಾಲ್ಕಾರು ಮನೆಯವರು ಇವರ ಮನೆ ಕೆಲಸಕ್ಕೆ ಅವರು ಹೋಗುವುದು, ಅವರ ಮನೆಯ ಕೆಲಸಕ್ಕೆ ಇವರು ಬರುವುದು. ಈ ಮೂಲಕ ಕೆಲಸ ಒಟ್ಟಾಗಿ ಮಾಡುವುದು ವಿಶೇಷ.

ಆನಗೋಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಭಾಹಿತರ ಕೇರಿಯಲ್ಲಿ ಸುತ್ತ ಮುತ್ತಲಿನ ಹತ್ತಾರು ಮನೆಯವರು ಮುರಿಯಾಳು ಪದ್ಧತಿಯ ಮೂಲಕ ಅಡಿಕೆ ಸುಲಿಯುವ ಕೆಲಸ ಸಲೀಸಾಗಿ ಮಾಡುತ್ತಿದ್ದಾರೆ. ಮರೆತುಹೋದ ಕೂಡು ಕುಟುಂಬದ ಕೆಲಸ, ಸುತ್ತಮುತ್ತಲಿನ ಮನೆಯವರು ಸಹಕಾರ ಪದ್ಧತಿಯಿಂದ ಕೃಷಿ ಕೆಲಸವನ್ನು ಸಂಭ್ರಮಿಸುತ್ತಿದ್ದಾರೆ. ಅಡಿಕೆ ಸುಲಿಯುವ ಕಂಬಳ ಮಾಡಿ ಪರಸ್ಪರ ಕೆಲಸ ಹಗುರ ಮಾಡಿಕೊಳ್ಳುವ ಜೊತೆಗೆ, ಕೆಲಸದ ನಡುವೆ ಹರಟೆ, ಖುಷಿ ಕ್ಷಣಗಳ ಸಲ್ಲಾಪದೊಡನೆ ಮಾಡುತ್ತಿದ್ದಾರೆ. ಒಂದೊಂದು ದಿನ ಒಂದೊಂದು ಮನೆಯಲ್ಲಿ ಸೇರುವ ಖುಷಿ. ಬಿಡುವಿಲ್ಲದ ಕೆಲಸದ ಭರಾಟೆ, ಆಗೀಗೆಲ್ಲಾ ಚಹಾ ತಿಂಡಿ ಸಮಾರಾಧನೆ ನಡೆದೇ ಇರುತ್ತದೆ. ಖಾಲಿಯಾದ ಹಳ್ಳಿಯಲ್ಲಿ ಎಲ್ಲ ಇಲ್ಲ ಎಂದು ಮೂಗು ಮುರಿಯುವವರ ನಡುವೆ ಯುವಕರು ಒಟ್ಟಾಗಿ ಮುರಿಯಾಳು ಪದ್ಧತಿ ಮೈಗೂಡಿಸಿಕೊಂಡು ಹಳ್ಳಿಗಳಲ್ಲಿ ಮತ್ತೆ ಜೀವಂತಿಕೆ ತರುವ ಪ್ರಯತ್ನ ಮಾದರಿಯಾಗಿದೆ.

–ಸುಬ್ರಾಯ ಬಿದ್ರೆಮನೆ, ಯಲ್ಲಾಪುರ





## ಕೌತುಕದ ಪನ್ಹಲಕಾಜಿ ಗುಹೆಗಳು

ಪನ್ಹಲಕಾಜಿ ಗುಹೆಗಳು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ದಾಪೋಲಿಯಲ್ಲಿವೆ. ಇವು ಮುಂಬೈಯಿಂದ ಸುಮಾರು 160 ಕಿ.ಮೀ. ದೂರದಲ್ಲಿವೆ. ಈ ಕೌತುಕಮಯ ಗುಹಾ ಸಂಕೀರ್ಣದೊಳಗೆ ಹೆಜ್ಜೆಯಿಡುತ್ತಿದ್ದಂತೆ ನೂರಾರು ವರ್ಷಗಳ ಹಿಂದಕ್ಕೆ ಹೋದಂತೆ ಭಾಸವಾಗುತ್ತದೆ. ಇಲ್ಲಿನ ಅದ್ಭುತ ಪುರಾತನ ವಾಸ್ತುಶಿಲ್ಪಕಲೆಯು ವಿಶೇಷ. ಇಲ್ಲಿನ ಪುಟಿಯುವ ಬಿಸಿನೀರಿನ ಪುಟ್ಟ ಕಾರಂಜಿಗಳೂ, ಅವುಗಳ ಜುಳು ಜುಳು ನಾದದ ಹಿಮ್ಮೇಳವೂ ಮನ ಮುದಗೊಳಿಸುವ ಕೌತುಕಗಳಾಗಿವೆ. ಇಲ್ಲಿ ಸುಮಾರು 29 ಬೌದ್ಧ ಮತ್ತು ಹಿಂದೂ ಗುಹೆಗಳಿವೆ. ಕ್ರಿ.ಶ. ಮೂರನೇ ಶತಮಾನದಲ್ಲಿ ಮಹಾಯಾನ ಪಂಥದಿಂದ ಕೆತ್ತಿದ ಸ್ತೂಪವೊಂದು ಇಲ್ಲಿನ 5ನೇ ಗುಹೆಯಲ್ಲಿದೆ. ಬ್ರಾಹ್ಮಿ ಮತ್ತು ದೇವನಾಗರಿ ಲಿಪಿಯ ಶಾಸನಗಳಿವೆ. ಕ್ರಿ.ಶ. 10–11ನೇ ಶತಮಾನದಲ್ಲಿ ಮತ್ತೊಂದು ಬೌದ್ಧ ಗುಂಪು ವಜ್ರಯಾನ ಪಂಥವು 10ನೇ ಗುಹೆಯನ್ನು ಸ್ಥಾಪಿಸಿತು. ಇದು ಅತ್ಯಂತ ಪ್ರಭಾವಶಾಲಿಯಾಗಿದ್ದು, ಅಕ್ಷೋಭ್ಯ ಮತ್ತು ಮಹಾಚಂದ್ರರೋಷಣ ದೇವತೆಗಳನ್ನಿಲ್ಲಿ ಸ್ತೂಪದ ಮೇಲೆ ಚಿತ್ರಿಸಲಾಗಿದೆ.

ಒಡಿಶಾ ಮತ್ತು ರತ್ನಗಿರಿ ಪ್ರದೇಶದ ಐತಿಹಾಸಿಕ ಬೌದ್ಧ ದೇವಾಲಯಗಳ ನಡುವಿನ ಸಂಬಂಧವನ್ನಿದು ಸೂಚಿಸುತ್ತದೆ. ಸಿಲಹರರ ಆಳ್ವಿಕೆಯ ಸಮಯದಲ್ಲಿ ಈ ಸ್ಥಳದಲ್ಲಿ ಶಿವ ಮತ್ತು ಗಣಪತಿಯ ಪೂಜೆ ಪ್ರಾರಂಭವಾಯಿತು. ಸರಸ್ವತಿ ದೇವಿಯ ಪ್ರತಿಮೆಯನ್ನೂ ನಾವಿಲ್ಲಿ ಕಾಣಬಹುದಾಗಿದೆ. ಇಲ್ಲಿರುವ ಒಟ್ಟು 29ರಲ್ಲಿ, 28 ಗುಹೆಗಳು ಕೋಟ್ಜೈ ಎಂಬ ಪರ್ವತನದಿಯ ಬಲದಂಡೆಯಲ್ಲಿವೆ. 14ನೇ ಗುಹೆಯಲ್ಲಿ ನಾಥ ಪಂಥದ ದೇವರುಗಳ ರಚನೆಗಳಿದ್ದು ಕೆಲವು ವಿರೂಪಗೊಂಡಿವೆ. 19ನೇ ಗುಹೆಯಲ್ಲಿ ಶಿವಲಿಂಗವಿದೆ. ಅದರ ಛಾವಣಿಯ ಮೇಲೆ ಹಿಂದೂ ಧರ್ಮಗ್ರಂಥಗಳಿವೆ. 29ನೇ ಗುಹೆಯನ್ನು ನಾಥ ಪಂಥದ ಮಂದಿ ಬಳಸುತ್ತಿದ್ದರೆಂದು ಐತಿಹ್ಯವಿದೆ. ಹಲವು ಶತಮಾನಗಳ ಹಿಂದಿನ ಪ್ರಸಿದ್ಧ ಇತಿಹಾಸವನ್ನು ಸಾರುವ ಪನ್ಹಲಕಾಜಿ ಗುಹೆಗಳು ಶಾಂತಿಯುತ ಮತ್ತು ಅದ್ಭುತ ವಿಹಾರ ತಾಣಗಳಾಗಿವೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ



## ಎತ್ತರದ ಶ್ರೀರಾಮನ ಪ್ರತಿಮೆ...

ಗೋವಾದ ಕಾಣಕೋಣದಲ್ಲಿರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದಲ್ಲಿನ 77 ಅಡಿಯ ಶ್ರೀರಾಮನ ಕಂಚಿನ ಪ್ರತಿಮೆಯಿದು. ಇದು ವಿಶ್ವದ ಅತಿ ಎತ್ತರದ ಶ್ರೀರಾಮನ ಪ್ರತಿಮೆಯಾಗಿದ್ದು, ಈ ಪ್ರತಿಮೆಯನ್ನು ಪದ್ಮಭೂಷಣ ಪುರಸ್ಕೃತ ಪ್ರಖ್ಯಾತ ಶಿಲ್ಪಿ ರಾಮ್ ಸುತಾರರವರು ವಿನ್ಯಾಸಗೊಳಿಸಿದ್ದಾರೆ. ಶ್ರೀ ಮಠದ 550ನೇ ವರ್ಷಾಚರಣೆಗೆ 120 ಕೇಂದ್ರಗಳಲ್ಲಿ 550ಕೋಟಿಗೂ ಹೆಚ್ಚು ರಾಮ ಜಪ ನಡೆದು, ವಿಶ್ವದಾಖಲೆಯೂ ಆಗಿದೆ. ಆ 120 ಜಪಕೇಂದ್ರಗಳ ಹೆಸರನ್ನು ಶ್ರೀರಾಮನ ಬೃಹತ್ ಪ್ರತಿಮೆಯ ಕೆಳಗಿನ ಶಿಲಾ ಪೀಠದ ಮೇಲೆ ಕೆತ್ತಲಾಗಿದೆ. ಪ್ರತಿಮೆಯ ಕೆಳಭಾಗದ ಆವರಣದಲ್ಲಿ ಈಗಾಗಲೇ ವಿನ್ಯಾಸಗೊಳಿಸಿರುವ ರಾಮಾಯಣ ಥೀಮ್ ಪಾರ್ಕ್ ನಿರ್ಮಾಣವಾಗಲಿದೆ.

–ಅಂಜನ್ ಎ. ಕಾಯ್ಕಿಣಿ, ಸಾಗರ